.................

ಆರೋಪ ಹೊರಿಸದೇ, ಅಪರಾಧ ತಿಳಿಸದೇ
ಗುಟ್ಟಿನಲ್ಲೇ ನ್ಯಾಯ ನಿರ್ಣಯವನ್ನೆಲ್ಲ
ಮುಗಿಸಿ
ಜಾರಿಯಲ್ಲೂ ತಂದ ತೀರ್ಮಾನ

('ವ್ಯಾಧಿ')

ಆದರೆ ಇಲ್ಲಿಯೂ ಪ್ರಕೃತಿಯು ನಿರುತ್ತರ, ವಿಶ್ವವೂ ನಿರುತ್ತರ. ಫ್ರೆಂಚ್ ಬರಹಗಾರ ಆಲ್ಬರ್ಟ್ ಕಾಮು Myth of Sisyphus ಕೃತಿಯಲ್ಲಿ ಹೇಳುವಂತೆ, ಮನುಷ್ಯ ಜೀವಿಗಳು ಒಂದು ಸುಸಂಗತವಾದ ತಾರ್ಕಿಕವಾದ ವಿವರಣೆ ಹಾಗೂ ವ್ಯಾಖ್ಯಾನವನ್ನು ತಮ್ಮ ಅಸ್ತಿತ್ವಕ್ಕೆ ಬಯಸುತ್ತಾರೆ. ಆದರೆ ಅಸಂಗತವಾದ ವಿಶ್ವವು ಕೊಡುವ ಉತ್ತರವೆಂದರೆ 'A deafening silence' ಕಿವಿ ಕಿವುಡಾಗುವಂಥ ಮೌನ. ಕಾಮೂನ ದೃಷ್ಟಿಯಲ್ಲಿ ವಿಶ್ವವು ಅಸಂಗತವಾದುದು. ನಾವು ಅಪೇಕ್ಷಿಸುವ ಉತ್ತರಗಳನ್ನು ಅದು ನೀಡುವುದಿಲ್ಲ. ಇಂಥ ಸ್ಥಿತಿಯಲ್ಲಿ ಎರಡೇ ಆಯ್ಕೆಗಳು ಸಾಧ್ಯ. ಒಂದು ಆತ್ಮಹತ್ಯೆ, ಇನ್ನೊಂದು ಈ ಅಸಂಗತೆಯ ಪ್ರತಿರೋಧ. ಸಿಸಿಫಸ್‌ಗೆ ದೇವರುಗಳು ಕೊಟ್ಟ ಶಾಪವೆಂದರೆ ಅವನು ಒಂದು ಬಂಡೆಗಲ್ಲನ್ನು ಬೆಟ್ಟದ ತುದಿಯವರೆಗೆ ತಳ್ಳಬೇಕು. ಅದು ತುದಿಯನ್ನು ತಲುಪಿದ ಕೂಡಲೇ ಕೆಳಗೆ ಉರುಳುತ್ತದೆ. ಅವನು ಮತ್ತೆ ಅದನ್ನು ತಳ್ಳಬೇಕು. ಇದು ಯಾಕೆ ಹೀಗೆ ಎಂದು ಕೇಳುವ ಬದಲು ಅದರಲ್ಲಿ ಅರ್ಥ ಕಂಡುಕೊಂಡು ಬದುಕಿರುವುದೇ ಪರಿಹಾರ. ಇದು ಸಾಧ್ಯವಾದಾಗ ಸಿಸಿಫಸ್ ಒಬ್ಬ happy individual ಆಗುತ್ತಾನೆ. ಚಿತ್ತಾಲರು ಇಂಥ ಅಸ್ತಿತ್ವವಾದವನ್ನು ಒಪ್ಪಿದವರಲ್ಲ. ಅವರ ಪ್ರಕಾರ ವಿಶ್ವದ ವಿದ್ಯಮಾನಗಳ ಆದಿ, ಅಂತ್ಯಗಳು ನಮಗೆ ಗೊತ್ತಿಲ್ಲ. ನಡೆಯುವ ಘಟನೆಗಳ ಕಾರ್ಯಕಾರಣ ಸಂಬಂಧವು ತರ್ಕಬದ್ಧವಾಗಿರುವುದಿಲ್ಲ. ಹೀಗಾಗಿ ನಮ್ಮ ಬದುಕು, ಪ್ರಜ್ಞೆ ಇವೆರಡೂ ಸೀಮಿತವೇ. ಆದರೆ ಈ ಪರಿಮಿತಿಯೊಳಗೆ ನಮ್ಮ ಸೃಜನಶೀಲತೆ ಹಾಗೂ ಕರ್ತೃತ್ವಶಕ್ತಿಗೆ ಇಂಬಿದೆ. ಆದ್ದರಿಂದ ಈ ಬದುಕನ್ನು ಸೆಲೆಬ್ರೇಟ್ ಮಾಡುವುದು ಪಲಾಯನವಲ್ಲ. ಅದು ಒಂದು ಸಮರ್ಪಕ ಆಯ್ಕೆ. ಚಿತ್ತಾಲರ 'ಕಾಮಸೂತ್ರ' ಕನ್ನಡ ಪರಂಪರೆಯಲ್ಲಿಯೇ ಲೈಂಗಿಕತೆಯ ಶ್ರೇಷ್ಠವಾದ celebration ಆಗಿದೆ. ನಿಸರ್ಗದ ಬಗೆಗಿನ ಅವರ ಪದ್ಯಗಳು ಜೀವಶಕ್ತಿಯ ವಿಶ್ವದ ಕ್ರಿಯಾಶೀಲತೆಯ ವಿಜೃಂಭಣೆಯಾಗಿವೆ. 'ಸಂಪರ್ಕ' ಎನ್ನುವ ಅವರ ಪದ್ಯ ಕೊನೆಯಾಗುವುದು ಹೀಗೆ:

ಖಾಲಿ ಟಿನ್ನುಗಳ ಬೀದಿ ಧೂಳಲ್ಲೂ ಮೈತಳೆದ
ಸೃಜನದೀ ಕೌತುಕವ
ನಿಯಾಳಿಸುತ್ತ ಕುಳಿತೆ, ಸೋಕಿ–ಸೋಕಿ–
ಬೆರಳಾಡಿಸಿದೆ.
ಉರದುಲುಮ್ಮಳ, ಮತ್ತೆ ಮತ್ತೆ ಜೀಕಳಿ ಪುಳಕ
ಇಷ್ಟು ಹತ್ತಿರದ ಜೀವ ಸೃಷ್ಟಿ ಸಂಪರ್ಕಕ್ಕೆ!

ಈ ಅದ್ಭುತ ಪದ್ಯವನ್ನು ಚಿತ್ತಾಲರು ಯಾವಾಗ ಬರೆದರು ಗೊತ್ತಿಲ್ಲ. ನನ್ನ ಕಲ್ಪನೆಯಲ್ಲಿ, ಅವರು ತಗುಲಿದ ರೋಗದ ಬವಣೆಯಲ್ಲಿ ಮುಂಬಾಯಿಯ ಐದನೆಯ ಮಜಲಿನ ಫ್ಲಾಟ್ ಒಂದರಲ್ಲಿ ಮಕ್ಕಳು ಬೀದಿ ಧೂಳನ್ನು ಸಣ್ಣ ಟಿನ್‌ನಲ್ಲಿ ತುಂಬಿ, ಅದರಲ್ಲಿ ಬೀಜ ನೆಟ್ಟು, ಅವುಗಳಿಗೆ ಅಂಕುರ ಮೂಡಿದ ವಿವಾದವನ್ನು ನೋಡಿ ಬರೆದಿದ್ದ ಪದ್ಯ ಇದು. ಇದು ವಾಸ್ತವವಲ್ಲದಿದ್ದರೂ ನಾನು ನಂಬಬಯಸುತ್ತೇನೆ. ಜೀವದ, ದೇಹದ ಆಧಾರವೇ ಕುಸಿಯುತ್ತಿರುವಾಗ ಈ ಸಂಪರ್ಕ ಪಡೆದು ಸಂಭ್ರಮಪಟ್ಟದ್ದು ಅಪ್ಪಟ ಚಿತ್ತಾಲ ಲೋಕದೃಷ್ಟಿಗೆ ಹತ್ತಿರವಾಗಿದೆ. ಅವರ ಕಾವ್ಯ ಬೇರು, ಅಂಕುರ, ಚಿಗುರುಗಳ ಬಗ್ಗೆ ಇದೆ. ಜೀವನದ ಸಾಧ್ಯತೆಗಳ ಬಗ್ಗೆ ಇದೆ.

ಕಾಮು ತನ್ನ ಕೃತಿಯ ಮೊದಲಲ್ಲಿ ಕವಿ ಪಿಂಡಾರ್‌ನನ್ನು ಉದ್ಧರಿಸುತ್ತಾನೆ:

ಓ ನನ್ನ ಆತ್ಮವೇ, ಶಾಶ್ವತ ಜೀವನಕ್ಕಾಗಿ,
ಅಮರತ್ವಕ್ಕಾಗಿ
ಹಾತೊರೆಯಬೇಡ. ಸಾಧ್ಯವಿರುವುದರ
ಸೀಮೆಗಳನ್ನೆಲ್ಲ ಸೂರೆ ಹೊಡೆದು ನೋಡು.

ಇದುವೇ ಮನುಷ್ಯ ಅಸ್ತಿತ್ವದ ಅತಾರ್ಕಿಕತೆಗೆ ಮಾಡಬಹುದಾದ ಪ್ರತಿರೋಧ. ಇದು ಚಿತ್ತಾಲರ ಕಾವ್ಯದ ತಳಹದಿಯೂ ಆಗಿದೆ.

●